ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560 001**

**ಸಂಖ್ಯೆ : ಸಿ1(2)(5) ಸ್ಥಾ ಪ ಬಡ್ತಿ /7/2017-18** **ದಿನಾಂಕ: 26-05-2020**

**ಜ್ಞಾಪನ**

ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ವೃಂದದ ಹುದ್ದೆಯಿಂದ ಪ್ರೌಢಶಾಲಾ ಮುಖ್ಯ ಶಿಕ್ಷಕರು ತತ್ಸಮಾನ ವೃಂದದ ಹುದ್ದೆಗಳಿಗೆ ಗಣಕೀಕೃತ ಕೌನ್ಸಿಲಿಂಗ್ ನಡೆಸುವ ಬಗ್ಗೆ.

ಉಲ್ಲೇಖ :1) ಇಲಾಖಾ ಮುಂಬಡ್ತಿ ಸಭೆ ದಿನಾಂಕ: 10.03.2020

2) ಮಾನ್ಯ ಆಯುಕ್ತರ ಆದೇಶ ದಿನಾಂಕ: 22-05-2020

3) ಬೆಂಗಳೂರು ವಿಭಾಗದ ಉಪ ನಿರ್ದೇಶಕರಿಂದ ಬಂದಿರುವ ಪ್ರಸ್ತಾವನೆಗಳಂತೆ.

***

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ವೃಂದದ ಹುದ್ದೆಯಿಂದ ಪ್ರೌಢಶಾಲಾ ಮುಖ್ಯ ಶಿಕ್ಷಕರು/ ತತ್ಸಮಾನ ವೃಂದದ ಹುದ್ದೆಗಳಿಗೆ ಬಡ್ತಿ ನೀಡಲು ಅರ್ಹ ಸಹ ಶಿಕ್ಷಕರ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಸದರಿ ಅರ್ಹತಾ ಪಟ್ಟಿಯಲ್ಲಿರುವ ಶಿಕ್ಷಕರಿಗೆ ಬಡ್ತಿಯನ್ನು ಹೊಂದಲು ಇಚ್ಛಿಸದಿದ್ದಲ್ಲಿ ಉಲ್ಲೇಖ-1 ರ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯ ಅನೋಮೋದಿತ ಪಟ್ಟಿ ಪ್ರಕಟಿಸಿದ ದಿನಾಂಕದಿಂದ 15 ದಿವಸಗಳ ಒಳಗಾಗಿ ನೀಡಲಾದ ಬಡ್ತಿಯನ್ನು ಬಿಟ್ಟುಕೊಡಲು ಸಕ್ಷಮ ಪ್ರಾಧಿಕಾರ ಮೂಲಕ ಲಿಖಿತ ಮನವಿಯನ್ನು ಸಲ್ಲಿಸಲು ತಿಳಿಸಲಾಗಿತ್ತು.

ಅದರಂತೆ 53 ಸಹ ಶಿಕ್ಷಕರು ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಹುದ್ದೆಗಳಿಗೆ ಬಡ್ತಿ ಹೊಂದಲು ನಿರಾಕರಿಸಿ ಸಕ್ಷಮ ಪ್ರಾಧೀಕಾರದ ಮೂಲಕ ಲಿಖಿತವಾಗಿ ಮನವಿ ಸಲ್ಲಿಸಿರುತ್ತಾರೆ. ಬಡ್ತಿ ನಿರಾಕರಿಸಿರುವ ಸಹ ಶಿಕ್ಷಕರುಗಳನ್ನು ಹೊರತುಪಡಿಸಿ, ಉಳಿದ ಅರ್ಹ ಸಹ ಶಿಕ್ಷಕರುಗಳಿಗೆ ಮುಖ್ಯ ಶಿಕ್ಷಕರ ವೃಂದದ ಹುದ್ದೆಗೆ ಬಡ್ತಿ ನೀಡುವ ಸಂಬಂಧ ಸ್ಥಳ ನಿಯುಕ್ತಿ ಗಣಕೀಕೃತ ಕೌನ್ಸಿಲಿಂಗ್ ದಿನಾಂಕವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ. ಅರ್ಹ ಸಹ ಶಿಕ್ಷಕರ ಪಟ್ಟಿಯನ್ನು ಇಲಾಖಾ ವೆಬ್-ಸೈಟ್‌ನಲ್ಲಿ ನಂತರ ಪ್ರಕಟಿಸಲಾಗುವುದು.

ಕೌನ್ಸಿಲಿಂಗ್ ನಡೆಯವ ಸ್ಥಳ : **ಶಿಕ್ಷಕರ ಸಧನ, ಕೆಂಪೇಗೌಡ ರಸ್ತೆ, ಬೆಂಗಳೂರು.**

| ದಿನಾಂಕ | ಪಟ್ಟಿ ಕ್ರಮ ಸಂಖ್ಯೆ **ರಿಂದ (ಪೂರ್ವಾಹ್ನ)** | ಪಟ್ಟಿ ಕ್ರಮ ಸಂಖ್ಯೆ **ರವರೆಗೆ (ಅಪರಾಹ್ನ)** |
|---|---|---|
| 04-06-2020 | **1-25** | **26-59** |
| 05-06-2020 | **60-110** | **111-160** |
| 06-06-2020 | **161-210** | **210 ರಿಂದ 259** |

(ಸಿರಿಯಣ್ಣವರ ಲಲಿತ ಚಂದ್ರಶೇಖರ)
ನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

ಪ್ರತಿಯನ್ನು :

1. ಮಾನ್ಯ ನಿರ್ದೇಶಕರು(ಪ್ರೌಢಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರಕಛೇರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ಸಹ ನಿರ್ದೇಶಕರು-1, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3. ಎಲ್ಲಾ ಉಪ ನಿರ್ದೇಶಕರು(ಆಡಳಿತ),ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು ವಿಭಾಗ ಇವರಿಗೆ ಮಾಹಿತಿಗೆ ಸೂಕ್ತ ಕ್ರಮಕ್ಕೆ ಹಾಗೂ ಸಂಬಂಧಿಸಿದ ಅರ್ಹ ಸಹ ಶಿಕ್ಷಕರಿಗೆ ಕೌನ್ಸಿಲಿಂಗ್‌ಗೆ ಹಾಜರಾಗಲು ಸೂಚಿಸುವುದು.
4. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ.